ಕರ್ನಾಟಕ ಸರ್ಕಾರ

# ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ಸಾರ್ವಜನಿಕ ಶಿಕ್ಷಣ ಇಲಾಖೆ ಅರಸೀಕೆರೆ ತಾಲ್ಲೋಕ್

ಸಂಖ್ಯೆ : ಸಿ.ಖಾ.ಪೂ.ಪ್ರಾ.ಶಾ.ಪರವಾನಗಿ/01/2022-23 ದಿನಾಂಕ 06/03/2023

871
9/3/2023

## :: ಜ್ಞಾಪನ ::

**ವಿಷಯ :** ಪೋದಾರ್ ಜಂಬೋ ಕಿಡ್ಸ್, ಹೆಂಜಗೊಂಡನಹಳ್ಳಿ ಅರಸೀಕೆರೆ, ಈ ಶಾಲೆಯ ಹೆಸರನ್ನು ಬದಲಾವಣೆ ಮಾಡುವ ಬಗ್ಗೆ.

**ಉಲ್ಲೇಖ :** ಆಡಳಿತಾಧಿಕಾರಿಗಳು, ಪೋದಾರ್ ಇಂಟರ್‌ನ್ಯಾಷನಲ್ ಸ್ಕೂಲ್, ಹೆಂಜಗೊಂಡನಹಳ್ಳಿ ಅರಸೀಕೆರೆ, ಇವರ ಪ್ರಸ್ತಾವನೆ ದಿನಾಂಕ 27/02/2023

******

**ಪ್ರಸ್ತಾವನೆ :-**

ಪೋದಾರ್ ಎಜುಕೇಶನ್ ನೆಟ್‌ವರ್ಕ್ ಪ್ರೈವೇಟ್ ಲಿಮಿಟೆಡ್, ಈ ಸಂಸ್ಥೆಯ ವತಿಯಿಂದ ನಡೆಯುತ್ತಿರುವ ಪೋದಾರ್ ಜಂಬೋ ಕಿಡ್ಸ್, ಹೆಂಜಗೊಂಡನಹಳ್ಳಿ ಅರಸೀಕೆರೆ, ಈ ಶಾಲೆಯ ಹೆಸರನ್ನು **ಪೋದಾರ್ ಪ್ರೆಪ್** ಎಂದು ಬದಲಾವಣೆ ಮಾಡಿಕೊಡಲು ಉಲ್ಲೇಖಿತ ಪತ್ರದಲ್ಲಿ ಆಡಳಿತ ಮಂಡಳಿಯವರು ಪ್ರಸ್ತಾವನೆಯನ್ನು ಅಗತ್ಯ ದಾಖಲಾತಿಯೊಂದಿಗೆ ಸಲ್ಲಿಸಿ ಮನವಿ ಮಾಡಿಕೊಂಡಿರುವ ಮೇರೆಗೆ ಈ ಕೆಳಗಿನಂತೆ ಹೆಸರು ಬದಲಾವಣೆ ಮಾಡಿ ಆದೇಶಿಸಿದೆ.

**ಆದೇಶ :-**

ಉಲ್ಲೇಖಿತ ಪತ್ರದಲ್ಲಿ ಸಲ್ಲಿಸಲಾಗಿರುವ ಪ್ರಸ್ತಾವನೆಯನ್ನು ಪರಿಶೀಲಿಸಿ ಸದರಿ ಆಡಳಿತ ಮಂಡಳಿಯ ಅಡಿಯಲ್ಲಿ ನಡೆಯುತ್ತಿರುವ ಪೋದಾರ್ ಜಂಬೋ ಕಿಡ್ಸ್ ಶಾಲೆಯ ಹೆಸರನ್ನು **ಪೋದಾರ್ ಪ್ರೆಪ್** ಎಂದು ಮರುನಾಮಕರಣ ಮಾಡಿ ಆದೇಶಿಸಿದೆ ಹಾಗೂ ಈ ಹಿಂದೆ ನೀಡಿದ ಆದೇಶವನ್ನು ರದ್ದುಪಡಿಸಿ ತಕ್ಷಣದಿಂದ ಜಾರಿಗೆ ಬರುವಂತೆ ಆದೇಶಿಸಿದೆ.

**ಈ ಪ್ರಮಾಣ ಪತ್ರವನ್ನು ಈ ಕೆಳಕಂಡ ಷರತ್ತಿಗೊಳಪಟ್ಟು ನೀಡಲಾಗಿದೆ**

01. ಶಾಲೆಯ ಹೆಸರು ಬದಲಾವಣೆ ದಿನಾಂಕದಿಂದ ಅನ್ವಯವಾಗುವಂತೆ ಮಾನ್ಯತೆ ನವೀಕರಣ ಪ್ರಸ್ತಾವನೆ ನೀಡಿ ಮಾನ್ಯತೆಯನ್ನು ನವೀಕರಿಸುವುದು ಹಾಗೂ ಮತ್ತೊಮ್ಮೆ ಶಾಲೆಯ ಶಾಲೆಯ ಹೆಸರು ಬದಲಾವಣೆ ಅವಕಾಶವಿರುವುದಿಲ್ಲ.
02. ಗವರ್ನಿಂಗ್ ಕೌನ್ಸಿಲ್ ಇವರು ನಿಯಮ-4 (4) ರಲ್ಲಿ ತಿಳಿಸಿರುವ ಎಲ್ಲಾ ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸಬೇಕು.
03. ಶಾಲಾ ನಿವೇಶನ, ವಿಸ್ತೀರ್ಣ, ಕಟ್ಟಡ, ಪಾಠ, ಪೀಠೋಪಕರಣಗಳು, ಸಿಬ್ಬಂದಿ ವರ್ಗ ಆರ್ಥಿಕ ಅನುಕೂಲತೆಗಳು ಮುಂತಾದವುಗಳನ್ನು ಒದಗಿಸುವ ಷರತ್ತಿಗೆ ಒಳಪಟ್ಟಿದೆ.
04. ಶಾಲೆಯನ್ನು ಮಂಜೂರು ಮಾಡಿರುವ ಮಾಧ್ಯಮದಲ್ಲಿ ಮತ್ತು ಅದೇ ಸ್ಥಳದಲ್ಲಿ ಮಾತ್ರ ತೆರೆಯತಕ್ಕದ್ದು ಹಾಗೂ ಯಾವುದೇ ಕಾರಣಕ್ಕೂ ಸ್ಥಳ ಬದಲವಣೆ ಮಾಡಲು ಅವಕಾಶವಿರುವಿದಿಲ್ಲ.
05. ಯಾವ ಆಡಳಿತ ಮಂಡಳಿಗೆ ನಡೆಸಲು ಅನುಮತಿ ನೀಡಲಾಗಿದೆಯೋ ಅದೇ ಮಂಡಳಿಯು ಅದೇ ಸ್ಥಳದಲ್ಲಿಯೇ ಮತ್ತು ಅದೇ ಹೆಸರಿನಲ್ಲಿ ನಡೆಸತಕ್ಕದು ಮತ್ತು ಯಾವುದೇ ಕಾರಣಕ್ಕೂ ಸರ್ಕಾರದ ಪೂರ್ವಾನುಮತಿ ಇಲ್ಲದೆ ಹಸ್ತಾಂತರಿಸತಕ್ಕದಲ್ಲ.
06. ಈ ಶಿಕ್ಷಣ ಸಂಸ್ಥೆಯವರು ಶಿಕ್ಷಣ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಜಾರಿಯಲ್ಲಿರುವ ಹಾಗೂ ಆಗಿಂದ್ದಾಗೆ ಹೊರಡಿಸಿದ ಎಲ್ಲ ಸಕಾರಿ ಆದೇಶಗಳು ಹಾಗೂ ನಿಯಮಗಳನ್ನು ಪಾಲಿಸತಕ್ಕದು. ಕರ್ನಾಟಕ ಶಿಕ್ಷಣ ಮಸೂದೆ-1983 ( ಕರ್ನಾಟಕ ಆಕ್ಟ್ ಸಂಖ್ಯೆ 95) ಇದರಡಿಯಲ್ಲಿ ಬರುವ ಕಾಯ್ದೆಗಳನ್ನು ಅದರಲ್ಲಿ ಹೆಚ್ಚಿಸಲಾಗಿರುವ ನಿಯಮಗಳನ್ನು ತಪ್ಪದೇ ಪಾಲಿಸತಕ್ಕದು.
07. ಈ ಪ್ರಾಥಮಿಕ ಶಾಲೆ ನೊಂದಣಿಯಂತೆ ಸರ್ಕಾರಿ ಅಧಿಸೂಚನೆ ಸಂಖ್ಯೆ ಇಡಿ175 ಪಿಎಂಸಿ 95 ದಿನಾಂಕ 07/09/1998 ಮತ್ತು ದಿನಾಂಕ 29/12/1998 ರ ಪ್ರಕಾರ ಶಾಶ್ವತ ಅನುದಾನ ರಹಿತವಾಗಿರುತ್ತದೆ, ಆಡಳಿತ ಮಂಡಳಿಯೂ ನೋಟರಿಯವರ ಮುಂದೆ ಪ್ರಮಾಣಿಕರಿಸಿದ ಒಪ್ಪಿಗೆ ಪತ್ರವನ್ನು ನೀಡುವುದು.

08. ಅನುಮತಿ ಪಡೆದ 2 ತಿಂಗಳೊಳಗೆ ಕರ್ನಾಟಕ ಶಿಕ್ಷಣ ಕಾಯ್ದೆ 1983 (ಆಕ್ಟ್ 1ಆಫ್-1995) ಪ್ರಕಾರ ಸೆಕ್ಷನ್-36 ರಿಂದ 39 ರೀತ್ಯಾ ಹಾಗೂ ಇಡಿ-131 ವಿವಿಧ-98 ಬೆಂಗಳೂರು, ದಿನಾಂಕ19/05/1999 ಪ್ರಕಾರ ಸಕ್ಷಮ ಪ್ರಾಧಿಕಾರಿಗಳಿಗೆ ರೆಕಗ್ನೀಷನ್‌ಗೆ ಅರ್ಜಿ ಸಲ್ಲಿಸತಕ್ಕದ್ದು.

09. ಅನುಮತಿ ನೀಡಿದ ಪ್ರತಿ ಒಂದು ತರಗತಿಯಲ್ಲಿ ಮಕ್ಕಳ ಹಾಗೂ ಶಿಕ್ಷಕರ ಅನುಪಾತವನ್ನು ನಿಯಮಾನುಸಾರ ಪಾಲಿಸತಕ್ಕದ್ದು.

10. ತರಬೇತಿ ಹೊಂದಿದ ಇಲಾಖೆಯ ನಿಯಮಗಳ ಪ್ರಕಾರ ವಿದ್ಯಾರ್ಹತೆ ಹೊಂದಿದ ಶಿಕ್ಷಕರನ್ನು ಮಾತ್ರ ನೇಮಿಸತಕ್ಕದು.

11. ಕರ್ನಾಟಕ ಶಿಕ್ಷಣ ಮಸೂದೆ ನಿಯಮಗಳ ಪ್ರಕಾರ ಶಾಲೆಗೆ ಬೇಕಾದ ಪೀಠೋಪಕರಣ, ಪಾಠೋಪಕರಣ, ಗ್ರಾಂಥಲಯ ಪುಸ್ತಕ, ಆಟದ ಮೈದಾನ, ಶಾಲಾ ಕಟ್ಟಡ ಮುಂತಾದ ಸೌಲಭ್ಯಗಳನ್ನು ಒಂದು ವರ್ಷದಲ್ಲಿ ಒದಗಿಸಿಕೊಳ್ಳತಕ್ಕದು, ಇಲ್ಲವಾದಲ್ಲಿ ನೊಂದಣಿಯನ್ನು ರದ್ದುಗೊಳಿಸಲಾಗುವುದು.

12. ಶಾಲೆ ತೆರದ ಬಗ್ಗೆ ವಿದ್ಯಾರ್ಥಿಗಳ ದಾಖಲಾತಿಯನ್ನು ಶಾಲೆ ನೊಂದಣಿಯಾದ ಅಥವಾ ಶೈಕ್ಷಣಿಕ ವರ್ಷ ಪ್ರಾರಂಭವಾದ 2 ತಿಂಗಳ ಒಳಗಾಗಿ ಈ ಕಛೇರಿಗೆ ತಿಳಿಸಬೇಕು ಒಂದು ವೇಳೆ ಶಾಲೆ ತೆರೆಯದಿದ್ದಲ್ಲಿ ಹಾಗೂ ಯಾವುದೇ ಷರತ್ತುಗಳನ್ನು ಪಾಲಿಸದಿದ್ದಲ್ಲಿ ಈ ಆದೇಶ ತನ್ನಿಂದ ತಾನೇ ರದ್ದಾಗುವುದು.

13. ಸಾರ್ವಜನಿಕ ಹಿತಾಸಕ್ತಿಯ ಮೇರೆಗೆ ಕುಂದುಕೊರತೆ ಉಂಟಾಗಿ ದೂರು ದಾಖಲಾದಲ್ಲಿ ಈ ಆದೇಶ ತಕ್ಷಣ ರದ್ದಾಗುತ್ತದೆ.

ಕ್ಷೇತ್ರ ಶಿಕ್ಷಣಾಧಿಕಾರಿಗಳು
ಸಾರ್ವಜನಿಕ ಶಿಕ್ಷಣ ಇಲಾಖೆ
ಅರಸೀಕೆರೆ ತಾಲ್ಲೋಕ್

**ಇವರಿಗೆ,**

1. ಆಡಳಿತಾಧಿಕಾರಿಗಳು, ಪೋದಾರ್ ಇಂಟರ್‌ನ್ಯಾಷನಲ್ ಸ್ಕೂಲ್, ಹೆಂಜಗೊಡನಹಳ್ಳಿ ಅರಸೀಕೆರೆ.
2. ಕಛೇರಿ ಪ್ರತಿ